





ಟೂರ್ನಿ ಆರಂಭವಾಗಲು ಕೆಲವೇ ದಿನಗಳು (ಏಪ್ರಿಲ್ 7) ಉಳಿದಿರುವಂತೆಯೇ ಚರ್ಚೆ, 'ಬಾಜಿ' ಕಸರತ್ತು ನಡೆಯುತ್ತಿದೆ.

2008ರಲ್ಲಿ ಟೂರ್ನಿ ಆರಂಭವಾದಗಿನಿಂದಲೂ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮೂರು ಬಾರಿ ರನ್ನರ್ಸ್ ಅಪ್ ಆಗಿದೆ. ವಿರಾಟ್ ಕೊಹ್ಲಿ ನಾಯಕತ್ವ, ಎಬಿ ಡಿವಿಲಿಯರ್ಸ್, ಕ್ರಿಸ್ ಗೇಲ್‌ನಂತಹ ದಿಗ್ಗಜರು ಇದ್ದ ತಂಡವು ಇದುವರೆಗೆ ಪ್ರಶಸ್ತಿ ಗೆದ್ದಿಲ್ಲ ಎನ್ನುವುದು ಅಚ್ಚರಿಯೇ. ಕಳೆದ ಬಾರಿಯಂತೂ ಲೀಗ್ ಪಾಯಿಂಟ್ ಪಟ್ಟಿಯಲ್ಲಿ ತಂಡ ಕೊನೆಯ ಸ್ಥಾನದಲ್ಲಿತ್ತು. ಆದರೆ ಈ ಬಾರಿಯ ಬಿಡ್‌ನಲ್ಲಿ ಮಹತ್ವದ ಹೆಜ್ಜೆ ಇಟ್ಟಿರುವ ಆರ್‌ಸಿಬಿ ಫ್ರ್ಯಾಂಚೈಸ್ ಕ್ರಿಸ್ ಗೇಲ್ ಅವರನ್ನು ಕೈ ಬಿಟ್ಟಿದೆ. ಬದಲಿಗೆ ಯುವ ಆಟಗಾರರಿಗೆ ಮಣೆ ಹಾಕಿದೆ. ಕರ್ನಾಟಕ ಇಬ್ಬರು ಆಟಗಾರರಾದ ಪವನ್ ದೇಶಪಾಂಡೆ ಮತ್ತು ಅನಿರುದ್ಧ ಜೋಶಿ ಅವರನ್ನು ಆಯ್ಕೆ ಮಾಡಿಕೊಂಡಿದೆ. ಮಾರ್ಚ್ ಎರಡನೇ ವಾರದಲ್ಲಿಯೇ ಅಭ್ಯಾಸ ಆರಂಭಿಸಿದೆ.

ವಿರಾಟ್ ಕೊಹ್ಲಿ, ಎಬಿ ಡಿವಿಲಿಯರ್ಸ್ ಭರ್ಜರಿ ಫಾರ್ಮ್‌ನಲ್ಲಿದ್ದಾರೆ. ಶ್ರೀಲಂಕಾದ ಸರಣಿಯಲ್ಲಿ ಮಿಂಚುತ್ತಿರುವ ವಾಷಿಂಗ್ಟನ್ ಸುಂದರ್, ಸ್ಪಿನ್ನರ್ ಯಜುವೇಂದ್ರ ಚಾಹಲ್, ಯುವ ಬೌಲರ್ ಮೊಹಮ್ಮದ್ ಸಿರಾಜ್, ಸ್ಫೋಟಕ ಬ್ಯಾಟ್ಸ್‌ಮನ್ ಸರ್ಫರಾಜ್ ಖಾನ್, ಕಾಲಿನ್ ಡಿ ಗ್ರ್ಯಾಂಡ್‌ಹೋಮ್, ಕ್ವಿಂಟನ್ ಡಿ ಕಾಕ್ ರನ್ ಹೊಳೆ ಹರಿಸುವ ಸಮರ್ಥರಾಗಿದ್ದಾರೆ. ಟಿಮ್ ಸೌಥಿ, ಕ್ರಿಸ್ ವೋಕ್ಸ್ ಅವರಂತಹ ಅನುಭವಿ ಬೌಲರ್‌ಗಳು ಈ ಬಾರಿ ತಂಡದ ಬಲ ಹೆಚ್ಚಿಸಿದ್ದಾರೆ.

ವಿಶ್ವ ಕ್ರಿಕೆಟ್‌ನಲ್ಲಿ ದಕ್ಷಿಣ ಅಫ್ರಿಕಾ ತಂಡಕ್ಕೆ 'ಚೋಕರ್ಸ್' ಎಂಬ ಅಡ್ಡಹೆಸರು ಇದೆ. ಇಡೀ ಟೂರ್ನಿಯಲ್ಲಿ ಚೆನ್ನಾಗಿ ಆಡಿ ಪ್ರಶಸ್ತಿ ಸನಿಹದಲ್ಲಿ ಮುಗ್ಗರಿಸುವುದರಿಂದ ದಕ್ಷಿಣ ಆಫ್ರಿಕಾ ತಂಡಕ್ಕೆ ಆ ಹೆಸರು ಬಂದಿದೆ. ಅಂತಹದೇ ಹಣೆಪಟ್ಟಿ ಆರ್‌ಸಿಬಿಗೆ ಐಪಿಎಲ್‌ನಲ್ಲಿದೆ. ಈ ಬಾರಿ ಅದು ಬದಲಾಗುವುದೇ ಎಂಬ ಕುತೂಹಲ ಎಲ್ಲರದ್ದು.

### 'ಕಿಂಗ್ಸ್' ಆಗುವ ಛಲದಲ್ಲಿ ಪಂಜಾಬ್

2014ರ ಆವೃತ್ತಿಯಲ್ಲಿ ಅಮೋಘ ಆಟವಾಡಿ ಫೈನಲ್ ತಲುಪಿದ್ದ ಕಿಂಗ್ಸ್ ಇಲೆವನ್ ಪಂಜಾಬ್ ತಂಡಕ್ಕೆ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿರಲಿಲ್ಲ. ಅದರ ನಂತರದ ಋತುಗಳಲ್ಲಿ ದೊಡ್ಡ ಸಾಧನೆ ಮಾಡಲು ಕೂಡ ಕಿಂಗ್ಸ್‌ಗೆ ಸಾಧ್ಯವಾಗಿರಲಿಲ್ಲ. ಆದರೆ ಈ ಬಾರಿ ಪುಟಿದೇಳುವ ಸಿದ್ಧತೆ ಮಾಡಿಕೊಂಡಿದೆ. ಕಿಂಗ್ಸ್ ಫ್ರ್ಯಾಂಚೈಸ್‌ನ ಸಹಮಾಲೀಕರಾದ, ಬಾಲಿವುಡ್ ನಟಿ ಪ್ರೀತಿ ಜಿಂಟಾ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ತಂಡದ ಸಲಹೆಗಾರ ವೀರೇಂದ್ರ ಸೆಹ್ವಾಗ್ ನೆರವಿನಿಂದ ಉತ್ತಮ ಆಟಗಾರರನ್ನು ತಂಡಕ್ಕೆ ಸೇರಿಸಿಕೊಂಡಿದ್ದಾರೆ. ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ತಂಡದ ನಾಯಕತ್ವ ನೀಡಲಾಗಿದೆ.

ತಂಡದಲ್ಲಿ ಕರ್ನಾಟಕದ ಕೆ.ಎಲ್. ರಾಹುಲ್, ಕರುಣ್ ನಾಯರ್, ಸ್ಫೋಟಕ ಬ್ಯಾಟ್ಸ್‌ಮನ್ ಕ್ರಿಸ್ ಗೇಲ್, ಸ್ಪಿನ್ನರ್ ಅಕ್ಷರ್ ಪಟೇಲ್, ಯುವರಾಜ್ ಸಿಂಗ್, ಅಲ್‌ರೌಂಡರ್‌ಗಳಾದ ಆ್ಯರನ್ ಫಿಂಚ್ ಮತ್ತು ಸ್ಟೋಯಿನಸ್ ಅವರಿದ್ದಾರೆ.

### ಉದಯಿಸುವ ತವಕದಲ್ಲಿ ಸನ್‌ರೈಸರ್ಸ್

ಕಳೆದ ಎರಡು ಋತುಗಳಲ್ಲಿ ಬಹುತೇಕ ಎಲ್ಲ ತಂಡಗಳಿಗೂ ಕಠಿಣ ಸವಾಲು ಒಡ್ಡಿದ್ದ ತಂಡವೆಂದರೆ ಸನ್‌ರೈಸರ್ಸ್ ಹೈದರಾಬಾದ್. ಈ ಬಾರಿಯೂ ಅತ್ಯಂತ ಸಮತೋಲನವಿರುವ ತಂಡ. ಸ್ಫೋಟಕ ಬ್ಯಾಟ್ಸ್‌ಮನ್ ಡೇವಿಡ್ ವಾರ್ನರ್ ನಾಯಕತ್ವದಲ್ಲಿ 2016ರ ಫೈನಲ್‌ನಲ್ಲಿ ಆರ್‌ಸಿಬಿ ತಂಡವನ್ನು ಸೋಲಿಸಿ ಟ್ರೋಫಿಗೆ ಮುತ್ತಿಕ್ಕಿತ್ತು. ಹೋದ ವರ್ಷ ಉತ್ತಮವಾಗಿ ಆಡಿದರೂ ಫೈನಲ್ ತಲುಪಿರಲಿಲ್ಲ. ಈ ಬಾರಿ ಮತ್ತಷ್ಟು ಹುರುಪಿನೊಂದಿಗೆ ಕಣಕ್ಕಿಳಿಯುತ್ತಿದೆ.

ಶಿಖರ್ ಧವನ್, ವಾರ್ನರ್, ಕರ್ನಾಟಕದ ಮನೀಷ್ ಪಾಂಡೆ, ಬಾಂಗ್ಲಾ ಆಲ್‌ರೌಂಡರ್ ಶಕೀಬ್ ಅಲ್ ಹಸನ್, ಯೂಸುಫ್ ಪಠಾಣ್, ವೃದ್ಧಿಮಾನ್ ಸಹಾ, ಕಾರ್ಲೋಸ್ ಬ್ರಾಥ್‌ವೇಟ್ ಬ್ಯಾಟಿಂಗ್ ವಿಭಾಗದ ನಿಸ್ಸೀಮರು. ಬೌಲಿಂಗ್‌ನಲ್ಲಿ ಸ್ವಿಂಗ್–ಕಿಂಗ್ ಭುವನೇಶ್ವರ್ ಕುಮಾರ್, ಬೇಸಿಲ್ ಥಂಪಿ, ಸಂದೀಪ್ ಶರ್ಮಾ, ಅಫ್ಘಾನಿಸ್ತಾನದ ರಶೀದ್ ಖಾನ್ ಅವರ ಸ್ಪಿನ್ ಮೋಡಿ ರಂಗೇರುವ ನಿರೀಕ್ಷೆ ಇದೆ. ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್‌ಗಳಲ್ಲಿ ಹೆಚ್ಚು ಸಬಲವಾಗಿರುವ ತಂಡ ಇದು.

### ನಾಲ್ಕನೆ ಪ್ರಶಸ್ತಿ ಕನಸಲ್ಲಿ ರೋಹಿತ್

ಐಪಿಎಲ್ ಟೂರ್ನಿಯ ಇತಿಹಾಸದಲ್ಲಿ ಮೂರು ಪ್ರಶಸ್ತಿ ಗೆದ್ದಿರುವ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಕೂಡ ತನ್ನ ಬಲ ಹೆಚ್ಚಿಸಿಕೊಂಡು ಕಣಕ್ಕಿಳಿಯುತ್ತಿದೆ. ಹೋದ ವರ್ಷದ ಹಲವು ಏಳುಬೀಳುಗಳನ್ನು ಕಂಡರೂ ಫೈನಲ್ ಪ್ರವೇಶಿಸಿದ್ದ ರೋಹಿತ್ ಶರ್ಮಾ ಬಳಗವು ಪ್ರಶಸ್ತಿ ಗಳಿಸಿತ್ತು. ಈ ಬಾರಿ ಹೆಚ್ಚು ಆಲ್‌ರೌಂಡರ್‌ಗಳೊಂದಿಗೆ ತಂಡವು ಕಣಕ್ಕಿಳಿಯುತ್ತಿದೆ. ಹಾರ್ದಿಕ್ ಪಾಂಡ್ಯ, ಕೃಣಾಲ್ ಪಾಂಡ್ಯ, ಕೀರನ್ ಪೊಲಾರ್ಡ್ ಪ್ರಮುಖರಾಗಿದ್ದಾರೆ. ಜಸ್‌ಪ್ರೀತ್ ಬೂಮ್ರಾ, ಪ್ಯಾಟ್ ಕಮಿನ್ಸ್, ಫಿಜ್ ಅವರ ವೇಗದ ಬಿರುಗಾಳಿ ತಂಡದ ಬಲ ಹೆಚ್ಚಿಸಿದೆ. ಸ್ವತಃ ರೋಹಿತ್, ಎವಿನ್ ಲೂಯಿಸ್ ರನ್ ಹೊಳೆ ಹರಿಸಬಲ್ಲ ಸಮರ್ಥರು.

### ಮರಳಿ ಅರಳುವತ್ತ ಚಿತ್ತ

2014ರ ಸ್ಪಾಟ್ ಫಿಕ್ಸಿಂಗ್ ಹಗರಣದಲ್ಲಿ ಸಿಲುಕಿ ಎರಡು ಅಮಾನತು ಶಿಕ್ಷೆ ಪೂರೈಸಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳಿಗೆ ಈ ಬಾರಿ ಮರಳಿ ಅರಳುವ ತವಕ.

ಈ ಎರಡೂ ತಂಡಗಳ ಪೈಕಿ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ಹೆಚ್ಚು ಕುತೂಹಲ ಕೆರಳಿಸಿದೆ. ಕೂಲ್ ಕ್ಯಾಪ್ಟನ್ ಮಹೇಂದ್ರಸಿಂಗ್ ದೋನಿ ಮತ್ತೊಮ್ಮೆ ನಾಯಕರಾಗಿ ಕಣಕ್ಕಿಳಿಯುತ್ತಿದ್ದಾರೆ. ಆದರೆ ಈ ತಂಡಕ್ಕೆ ಆಯ್ಕೆಯಾದ ಬಹುತೇಕರು 30 ವರ್ಷ ದಾಟಿದ ಅನುಭವಿಗಳು.

ಮಹೇಂದ್ರಸಿಂಗ್ ದೋನಿ (36 ವರ್ಷ), ಇಮ್ರಾನ್ ತಾಹೀರ್ (38), ಹರ್ಭಜನ್ ಸಿಂಗ್ (37), ಶೇನ್ ವಾಟ್ಸನ್ (36), ಡ್ವೇನ್ ಬ್ರಾವೊ (34), ಫಾಫ್ ಡುಪ್ಲೆಸಿ (33), ಕೇದಾರ್ ಜಾಧವ್ (32), ಸುರೇಶ್ ರೈನಾ (31), ಅಂಬಟಿ ರಾಯುಡು (32), ಕರಣ್ ಶರ್ಮಾ (31) ಅವರು ತಂಡದಲ್ಲಿ ಸೇರ್ಪಡೆಯಾಗಿದ್ದಾರೆ. ಆದ್ದರಿಂದ ಈ ಬಳಗವನ್ನು ಕೆಲವರು 'ಚೆನ್ನೈ ಸೀನಿಯರ್ ಕಿಂಗ್ಸ್' ಎಂದು ವ್ಯಂಗ್ಯವಾಡಿದ್ದಾರೆ. ಭಾರತ ಕ್ರಿಕೆಟ್‌ನ ಎಲ್ಲ ಮಾದರಿಗಳಲ್ಲಿಯೂ ಅತ್ಯಂತ ಯಶಸ್ವಿ ನಾಯಕ ದೋನಿ ಸಾಮರ್ಥ್ಯವನ್ನು ಕಡೆಗಣಿಸುವಂತಿಲ್ಲ.

ಸ್ಟೀವ್ ಸ್ಮಿತ್ ಅವರಿಗೆ ನಾಯಕತ್ವದ ಪಟ್ಟ ಕಟ್ಟಿರುವ ರಾಜಸ್ಥಾನ ರಾಯಲ್ಸ್ ಕೂಡ ಪ್ರಶಸ್ತಿ ಮೇಲೆ ಕಣ್ಣಿಟಿದೆ. ಅಜಿಂಕ್ಯ ರಹಾನೆ, ಜಾಸ್ ಬಟ್ಲರ್, ಸಂಜು ಸ್ಯಾಮ್ಸನ್ ಉತ್ತಮ ಬ್ಯಾಟ್ಸ್‌ಮನ್‌ಗಳು. ರನ್‌ಗಳನ್ನು ಪೇರಿಸಬಲ್ಲ ಸಮರ್ಥರು. ಆದರೆ ಅವರ ತಂಡದಲ್ಲಿ ಉತ್ತಮ ಬೌಲರ್‌ಗಳ ಕೊರತೆ ಇದೆ. ಇದನ್ನು ಟೂರ್ನಿಯಲ್ಲಿ ಯಾವ ರೀತಿ ನಿಭಾಯಿಸಲಿದ್ದಾರೆಂದು ಕಾದು ನೋಡಬೇಕು. ಕನ್ನಡಿಗರಾದ ಕೃಷ್ಣಪ್ಪ ಗೌತಮ್, ಶ್ರೇಯಸ್ ಗೋಪಾಲ್, ಬಿಡ್‌ನಲ್ಲಿ 11.50 ಕೋಟಿ ರೂಪಾಯಿ ಪಡೆದಿದ್ದ ಜಯದೇವ್ ಉನದ್ಕತ್, ಬೆನ್ ಸ್ಟೋಕ್ಸ್ ಈ ತಂಡದ ಪ್ರಮುಖ ಶಕ್ತಿ.

ಕೋಲ್ಕತ್ತ ನೈಟ್ ರೈಡರ್ಸ್ ತಂಡವೂ ಈ ಬಾರಿ ಪ್ರಶಸ್ತಿ ರೇಸ್‌ನಲ್ಲಿದೆ. ದಿನೇಶ್ ಕಾರ್ತಿಕ್ ನಾಯಕತ್ವದ ಈ ತಂಡದಲ್ಲಿ ಕನ್ನಡಿಗ ಆರ್. ವಿನಯಕುಮಾರ್, ರಾಬಿನ್ ಉತ್ತಪ್ಪ ಸೇರಿದಂತೆ ಅನುಭವಿ ಆಟಗಾರರು ಇದ್ದಾರೆ. ಯುವ ಬೌಲರ್ ಕ್ರಿಸ್ ಲೀನ್ ಮೇಲೆ ಹೆಚ್ಚಿನ ಭರವಸೆ ಇದೆ. ಇಲ್ಲಿಂದ ಹೊರಬಂದಿರುವ ಗೌತಮ್ ಗಂಭೀರ್ ಈಗ ಡೆಲ್ಲಿ ಡೇರ್‌ಡೆವಿಲ್ಸ್ ತಂಡದ ನಾಯಕತ್ವದ ಹೊಣೆ ಹೊತ್ತಿದ್ದಾರೆ.

ವಿನ್ಯಾಸ: ದಿಲ್